ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 113/2014

(ಚಾ.ಸಾ.5 ಪ್ರಾ.ಸಾ.3)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕಃ 19.03.2021.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ದಿವಾಕರ್‌ನಾಯಕ್ |
| ತಂದೆಯ/ಗಂಡನ ಹೆಸರು | ಃ | ಲೇಟ್ ಮುನಿಯನಾಯಕ್ |
| ವಯಸ್ಸು | ಃ | 26 ವರ್ಷ |
| ಉದ್ಯೋಗ | ಃ | ಇಲ್ಲ |
| ವಾಸ | ಃ | ನಾಯಕಂದ್ರಹಳ್ಳಿ |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ಚಾಸಾ-1 ಮತ್ತು ಅವರ ಮಕ್ಕಳು ನನಗೆ ಪರಿಚಯಸ್ಥರು. ಚಾಸಾ-1 ಲಂಬಾಣಿ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳು ಗೊತ್ತು. 4ನೇ ಆರೋಪಿ ಗೈರು ಹಾಜರಾಗಿದ್ದು ಹಾಜರಾತಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು 4ನೇಆರೋಪಿಯ ಗುರುತಿಸುವಿಕೆಗಾಗಿ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಚಾಸಾ-1ರವರಿಗೆ ಮೃತ ಶ್ರೀನಿವಾಸ ಮಗ. ಆತ ಈಗ ಜೀವಂತ ಇಲ್ಲ, ಮೃತ ಶ್ರೀನಿವಾರವರ ವಿವಾಹವಾಗಿತ್ತು, ಆತನ ಪತ್ನಿ 8ನೇ ಆರೋಪಿ ಪದ್ಮಾಬಾಯಿ ಆಕೆ ಈಗ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಮೃತರು ಮತ್ತು ಆತನ ಪತ್ನಿಗೆ ಇಬ್ಬರು ಹೆಣ್ಣುಮಕ್ಕಳು.

2. 8ನೇ ಆರೋಪಿ ಆಕೆಯ ವಿವಾಹವಾದ ನಂತರ ಮೃತ ಶ್ರೀನಿವಾಸರವರೊಂದಿಗೆ ನಮ್ಮ ಊರಿನಲ್ಲಿ ವಾಸವಾಗಿದ್ದರು. 7-8 ವರ್ಷದ ಹಿಂದೆ ನಾನು ಕಾಲೇಜಿ ಮುಗಿಸಿ ಸಂಜೆ 7ರಿಂದ 7.15ರ ಸಮಯದಲ್ಲಿ ಮನೆಗೆ ವಾಪಸ್ಸಾಗುತ್ತಿದ್ದಾಗ ತುಂಬಾ ಜನ ಗುಂಪುಗೂಡಿದ್ದರು. ಅಲ್ಲಿ ನಾನು ಒಂದು ಆಟೋ ನೋಡಿದ್ದೆ. ಆಟೋದಲ್ಲಿ ಮೃತ ಶ್ರೀನಿವಾಸರವರ ಕೈ ಕಾಲುಗಳನ್ನು ಕಟ್ಟಿ ಆಟೋ ಶೀಟ್‌ನ ಕೆಳಗಡೆ ಹಾಕಿದ್ದರು. ಆ ದಿನ ನಾನು ನೋಡಿದ ಆಟೋದ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಆಟೋ ಚಾಲಕ ಈ ದಿನ ನ್ಯಾಯಾಲಯದ ಮುಂದೆ ಹಾಜರಿಲ್ಲ. ಸಾಕ್ಷಿ ಆಟೋದ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-9ರಿಂದ 12 ಎಂದು ಗುರುತಾಗಿರುತ್ತವೆ.

3. ಆಟೋ On ಆಗಿತ್ತು ಆದರೆ move ಆಗುತ್ತಿರಲಿಲ್ಲ. ನಂತರ ನಾನು ಮನೆಗೆ ಹೋಗಿದ್ದೆ. ಮೃತ ಶ್ರೀನಿವಾಸರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರಬಹುದು ಎಂದು ಯೋಚಿಸಿ ನಾನು ಮನೆಗೆ ಹೋಗಿದ್ದೆ. ನಂತರ ನಾನು ಟಿವಿಯಲ್ಲಿ ಶ್ರೀನಿವಾಸ ಮೃತನಾಗಿರುವುದಾಗಿ ನೋಡಿದ್ದೆ. ಆತ ಯಾವ ಕಾರಣಕ್ಕೆ ಮೃತರಾಗಿದ್ದರೋ ನನಗೆ ಗೊತ್ತಾಗಲಿಲ್ಲ. ಮೃತನ ತಾಯಿ ಪೋಲಿಸ್ ಠಾಣೆಗೆ ಈ ಬಗ್ಗೆ ದೂರು ನೀಡಿದ್ದರು.

4. ನನ್ನನ್ನು ಪೋಲಿಸರು ಕರೆಸಿ ವಿಚಾರಣೆ ಮಾಡಿದ್ದರು. ನಾನು ಈ ದಿನ ನ್ಯಾಯಾಲಯದಲ್ಲಿ ಹೇಳಿರುವ ವಿಚಾರವನ್ನು ಮಾತ್ರ ಪೋಲಿಸರ ಮುಂದೆ ಹೇಳಿದ್ದೆ. ನಾನು ಪೋಲಿಸರಿಗೆ ಯಾರು ಮೃತರನ್ನು ಎತ್ತಿಕೊಂಡು ಆಟೋದಲ್ಲಿ ಹೋದದ್ದು ಆಟೋ ಚಾಲಕ ಯಾರು, ಕೊಲೆ ಮಾಡಿದ್ದು ಯಾರು ಎಂದು ಹೇಳಿಕೆ ನೀಡಿರಲಿಲ್ಲ. ನಟರಾಜರವರು ಸದರಿ ಆಟೋ ಚಾಲಕನ ಆಸನದಲ್ಲಿ ಕುಳಿತಿದ್ದರು ಈ ದಿನ ಆತ ನ್ಯಾಯಾಲಯದಲ್ಲಿ ಹಾಜರಾಗಿಲ್ಲ. ಆಟೋ ಚಾಲನ ಆಸನದಲ್ಲಿ ಕುಳಿತಿದ್ದ ನಟರಾಜ ಈಗ ಬದುಕಿಲ್ಲ ಆತ 10-15 ದಿನಗಳ ಹಿಂದೆ

ಮೃತರಾಗಿರತ್ತಾರೆ. ನಟರಾಜರವರ ಜೊತೆ ಬೇರೆ ಯಾರು ಆಟೋ ಇದ್ದ ಸ್ಥಳದಲ್ಲಿದ್ದರೋ ನಾನು observe ಮಾಡಿಲ್ಲ.

5. ಪೋಲಿಸರು ತನಿಖೆ ವೇಳೆ 3ನೇ ಆರೋಪಿ ಸಂತೋಷ ನಾಯಕ, 5ನೇ ಆರೋಪಿ ನಟರಾಜ ನಾಯಕ, 2ನೇ ಆರೋಪಿ ರವಿ ನಾಯಕರವರನ್ನು ಪೋಲಿಸರು ವಶಕ್ಕೆ ಪಡೆದಿದ್ದರು. ಚಾಸಾ-1 ಈ ಬಗ್ಗೆ ದೂರು ನೀಡಿದ್ದು ಆಕೆಯ ಮಗ ಕೊಲೆಯಾಗಿದ್ದು ಅದಕ್ಕೆ ಸಂಬಂಧಿಸಿದಂತೆ 2, 3 ಮತ್ತು 5ನೇ ಆರೋಪಿಗಳನ್ನು ಪೋಲಿಸರು ಬಂದಿಸಿದ್ದಾಗಿ ತಿಳಿದುಬಂತು. 2 ಮತ್ತು 3ನೇ ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ 2 ಮತ್ತು 3ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಟಿವಿಯಲ್ಲಿ ವಾರ್ತೆ ನೋಡಿದ ಕಾರಣ ಮತ್ತು ಬೇರೆಯವರಿಂದ ತಿಳಿದ ಕಾರಣ 2, 3 ಮತ್ತು 5ನೇ ಆರೋಪಿಗಳು ಚಾಸಾ-1ರವರ ಮಗ ಶ್ರೀನಿವಾಸರವರರವನ್ನು ರಾಜೀವಗಾಂಧಿ ಕಾಲೋನಿಯಲ್ಲಿ ಕೊಲೆ ಮಾಡಿರುವುದಾಗಿ ತಿಳಿದುಬಂತು.

6. **ಪಾಟೀ ಸವಾಲುಃ** ಆರೋಪಿ ಪರ ವಕೀಲರು ಕಲಂ 231(2) ಸಿಆರ್‌ಪಿಸಿ ಅನ್ವಯ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.